ಕರ್ನಾಟಕ ವಿಧಾನಸಭೆ

ಶುಕ್ರವಾರ, ೧೩ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.45 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದ್ದರು.

ವರದಿಯನ್ನೊಪ್ಪಿಸುವುದು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : (ಉಪಾಧ್ಯಕ್ಷರು) ಖಾಸಗೀ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 3ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ :

ಶ್ರೀ ಜಿ. ಎಸ್. ಆಚಾರ್ : ಖಾಸಗೀ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 3ನೇ ವರದಿಯನ್ನು ಒಪ್ಪಬಹುದೆಂದು ನಾನು ಸೂಚಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1992-93 ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ (ಮುಂದುವರೆದದ್ದು)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಬಜೆಟ್ ಮೇಲೆ ಮಾತಾನಾಡಬೇಕೆಂದು ತಾವು ನನ್ನನ್ನು ಕರೆದಿದ್ದೀರಿ. ಕರ್ನಾಟಕ ರಾಜ್ಯವಲ್ಲದೆ ಇಡೀ ಭಾರತದೇಶದಲ್ಲಿ ಬಜೆಟ್ ಬಗ್ಗೆ ಚರ್ಚೆಯಾಗುತ್ತಿರುವ ಈ ಸಂದರ್ಭದಲ್ಲಿ ಬಜೆಟ್ ಬಗ್ಗೆ ಮಾತಾನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿದೆ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಈ ಬಜೆಟ್‌ನ್ನು ಕರೆಯುತ್ತಾರೆ. ಈ ಬಜೆಟ್ ಯಾವ ಸಂದರ್ಭದಲ್ಲಿ ಮಂಡನೆಯಾಗಬೇಕಾಗಿತ್ತು ಆಗ ಆಗದೇ, ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಮಂಡನೆ ಮಾಡುವುದಕ್ಕೆ ಮೊದಲೇ ಇದು ಬಹಿರಂಗವಾಗಿರುವುದು ಸುಸ್ಪಷ್ಟ. ಇದು ಲೀಕೇಜ್ ಬಜೆಟ್‌ಯೆಂದು ಇಡೀ ಜನ ಸಮುದಾಯ ಮಾತಾನಾಡಿಕೊಳ್ಳುತ್ತಿದ್ದಾರೆ ಅದನ್ನು ನಾವು ಕಾಣುತ್ತಿದ್ದೇವೆ. ಈ ಬಜೆಟ್‌ನಲ್ಲಿ ಸ್ವಚ್ಛತೆಯಿಲ್ಲ ಮಲೀನತೆ ತುಂಬಿದೆ ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಾಖ್ಯಾನ ಕೊಡುತ್ತಿದ್ದಾರೆ. ಇದೊಂದು ಪೀಸ್ ಆಫ್ ಪೇಪರ್ ಎಂದು ಇದು ಕಸದ ಬುಟ್ಟಿಗೆ ಹಾಕುವಂತಹ ಬಜೆಟ್‌ಯೆಂದು ಮಾತಾನಾಡತಕ್ಕ ಸಂದರ್ಭದಲ್ಲಿ ನಾವು ಇವತ್ತು ಇದ್ದೇವೆ. ಇದನ್ನು ಸ್ಕ್ರೂಪ್ ಆಫ್ ಅಂತ ಕಸದ ಬುಟ್ಟಿಗೆ ಹಾಕುವಂಥ ಬಜೆಟ್ ಎಂದು ಎಲ್ಲರೂ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಇವತ್ತು ಇದ್ದೇವೆ. ವಿಧಾನಸಭೆಯ ಒಳಗಡೆಯೇ ಈ ರೀತಿ ಬಜೆಟ್ ಬಗ್ಗೆ ಸ್ಪಷ್ಟವಾಗಿ ನಮ್ಮ ಸಭಾಧ್ಯಕ್ಷರು ಇದಕ್ಕೆ ಒಂದು ತನಿಖೆ ಮಾಡುವಂಥ ಪ್ರಯತ್ನ ತಾವು ಮಾಡುತ್ತೇವೆ. ಎಂದು ಈಗಾಗಲೇ ಭರವಸೆ ಕೊಟ್ಟಿದ್ದಾರೆ. ಒಂದು ರೀತಿಯ ಕುಖ್ಯಾತಿ ಪಡೆದಂಥ ಬಜೆಟ್ ಇವತ್ತು ಹೊರಗೆ ಬಂದಿರುವುದು ನಮ್ಮ ಕರ್ನಾಟಕ ರಾಜ್ಯಕ್ಕೇ ಅವಮಾನ. ಇದು ಇಡೀ ಸರ್ಕಾರ ಒಂದು ರೀತಿಯಲ್ಲಿ ತಲೆತಗ್ಗಿಸುವಂಥ ಪರಿಸ್ಥಿತಿಯ ನಿರ್ಮಾಣ ಆಗಿದೆ. ಇದಕ್ಕೇ ಈ ಕಾಂಗ್ರೆಸ್ ಸರ್ಕಾರವೇ